ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.

ಸಿ. ಸಿ. ಸಂಖ್ಯೆ **22/2022** ಸಿ.ಡಬ್ಲ್ಯೂ **02,** ಪಿ.ಡಬ್ಲ್ಯೂ **01**

| | | |
|---|---|---|
| ಸಾಕ್ಷಿಯ ಹೆಸರು | - ಮಹೇಶ ಬಿ | ದಿನಾಂಕ 04-07-2023 ರಂದು ಪ್ರಮಾಣ ವಚನ ಮಾಡಿಸಲಾಯಿತು. |
| ತಂದೆಯ ಹೆಸರು | - ಕುಬೇರಪ್ಪ | |
| ವಯಸ್ಸು | - 35 ವರ್ಷ | |
| ಉದ್ಯೋಗ | - ಮುಖ್ಯ ಪೇದೆ, ತೋರಣಗಲ್ಲ ಪೋಲಿಸ ಠಾಣೆ | |
| ವಾಸ ಸ್ಥಳ | - ತೋರಣಗಲ್ಲ | |

## ಮುಖ್ಯ ವಿಚಾರಣೆ ಸಸಅ ರವರಿಂದ

* * * *

ನಾನು 2018 ರಿಂದ ಮಾರ್ಚ್ 2023 ರವರೆಗೆ ಸಂಡೂರು ಪೋಲಿಸ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 24-08-2021 ರಂದು ನಾನು ಠಾಣೆಯಲ್ಲಿ ಇದ್ದಾಗ ಚಾಸಾ 1 ರವರು ಸಂಡೂರು ಪಟ್ಟಣದ ಪುರಸಭೆ ಬಸ್ಸ ನಿಲ್ದಾಣದ ಬಳಿ ಸಾರ್ವಜನಿಕ ಸ್ಥಳದಲ್ಲಿ ಮಟಕಾ ಜುಜಾಟ ನಡೆಯುತ್ತಿದ್ದೆ ಎಂದು ಮಾಹಿತಿ ಬಂದಿದೆ ಎಂದು ತಿಳಿಸಿ ಇಬ್ಬರು ಪಂಚರನ್ನು ಕರೆದುಕೊಂಡು ಬರಲು ನನಗೆ ತಿಳಿಸಿದ್ದರಿಂದ ನಾನು ಪಂಚರಾದ ಚಾಸಾ 7 ಮತ್ತು 8 ರವರನ್ನು ಠಾಣೆಗೆ ಕರೆದುಕೊಂಡು ಬಂದಿರುತ್ತೇನೆ. ನಂತರ ಚಾಸಾ 1 ರವರು ಅವರಿಗೆ ಮಾಹಿತಿಯನ್ನು ತಿಳಿಸಿದ್ದು ಅವರು ಒಪ್ಪಿದ ನಂತರ ನಾನು, ಪಂಚರು ಹಾಗೂ ಸಿಬ್ಬಂದಿಯವರಾದ ಚಾಸಾ 3 ಮತ್ತು 4 ರವರು ಚಾಸಾ 1 ರವರೊಂದಿಗೆ ಇಲಾಖಾ ಜೀಪ ನಲ್ಲಿ ಮದ್ಯಾಹ್ನ 1 ಗಂಟೆಗೆ ಹೋಗಿದ್ದು ಸ್ವಲ್ಪ ದೂರದಲ್ಲಿ ಜೀಪ ನ್ನು ನಿಲ್ಲಿಸಿ ನಡೆದುಕೊಂಡು ಹೋಗಿ ಮರೆಯಾಗಿ ನೋಡಿದಾಗ ಒಬ್ಬ ವ್ಯಕ್ತಿ ಜನರಿಂದ ಹಣವನ್ನು ಪಡೆದು ಮಟಕಾ ಚೀಟಿಯನ್ನು ಬರೆದುಕೊಳ್ಳುತ್ತಿದ್ದನು ಹಾಗೂ ರೂ.1 ಕ್ಕೆ ರೂ. 80 ಕೊಡುವುದಾಗಿ ಕೂಗಿ ಹೇಳುತ್ತಿದ್ದನು. ನಾವು ಕೂಡಲೇ ದಾಳಿ ಮಾಡಿದಾಗ ಸಾರ್ವಜನಿಕರು ಓಡಿ ಹೋಗಿದ್ದು, ಮಟಕಾ ಚೀಟಿಯನ್ನು ಬರೆಯುತ್ತಿದ್ದ ವ್ಯಕ್ತಿಯನ್ನು ಹಿಡಿದುಕೊಂಡಿರುತ್ತೆವೆ. ಆರೋಪಿಯ ಹೆಸರು ಶ್ರೀನಿವಾಸ ಶೆಟ್ಟಿ ಎಂದು ತಿಳಿಸಿರುತ್ತಾನೆ. ನಂತರ ನಾವು ಪಂಚರ ಸಮಕ್ಷಮ ಆರೋಪಿಯನ್ನು ಅಂಗಶೋಧನೆ ಮಾಡಲು ಹೋದಾಗ ಆರೋಪಿತ ಏಕೆ ಶೋಧನೆ ಮಾಡುತ್ತಿಯಾ ನಿನ್ನನ್ನು ನೋಡಿಕೊಳ್ಳುತ್ತೇನೆ ಎಂದು ನನ್ನ ಕರ್ತವ್ಯಕ್ಕೆ ಅಡ್ಡಿ ಪಡೆಸಿರುತ್ತಾನೆ. ಆ ಸಮಯದಲ್ಲಿ ಚಾಸಾ 3 ರವರು ಆರೋಪಿಯನ್ನು ಸಹಕರಿಸಲು ಹೇಳಿದಾಗ

This is a True Copy of the Court Records Online. Authenticated @ districts.ecourtsindia.com/cnr/KABI600000632022/truecopy/order-1.pdf

ಆರೋಪಿತ ಚಾಸಾ 3 ರವರಿಗೆ ಕುತ್ತಿಗೆಗೆ ಹೊಡೆದು ಓಡಿ ಹೋಗಿಲು ಪ್ರಯತ್ನಿಸಿದಾಗ ನಾವು ಆರೋಪಿಯನ್ನು ಹಿಡಿದಿರುತ್ತೇವೆ. ನಂತರ ಅಂಗಶೋಧನೆ ಮಾಡಿದಾಗ ಆರೋಪಿಯ ಬಳಿ ಒಂದು ಮಟಕಾ ಚೀಟಿ, ಪೇನ್ ಮತ್ತು ನಗದು ಹಣ ರೂ. 1230/- ಇರುತ್ತದೆ. ನಾವು ಪಂಚರ ಸಮಕ್ಷಮ ಮಟಕಾ ಚೀಟಿಯನ್ನು ನೋಡುತ್ತಿದ್ದಾಗ ಆರೋಪಿ ಅದನ್ನು ಕಸಿದುಕೊಂಡು ಹರೆದುಹಾಕಿರುತ್ತಾನೆ. ನಂತರ ಹರಿದು ಹಾಕಿದ ಮಟಕಾ ಚೀಟಿ, ಪೇನ್ನು ಮತ್ತು ನಗದು ಹಣವನ್ನು ಚಾಸಾ 1 ರವರು ಪಂಚನಾಮೆ ಮಾಡಿ ಜಪ್ತು ಪಡೆಸಿಕೊಂಡಿರುತ್ತಾರೆ. ನಂತರ ಠಾಣೆಗೆ ಬಂದು ಆರೋಪಿಯ ವಿರುದ್ದ ದೂರನ್ನು ನೀಡಿರುತ್ತಾರೆ. ನಾನು ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯು ಜಪ್ತು ಪಡೆಸಿಕೊಂಡ ಬಾಲ್ ಪೇನ್, ಮಟಕಾ ಪಟ್ಟಿ ಮತ್ತು ನಗದು ಹಣವನ್ನು ರೂ. 1230/- ನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ 1 ರಿಂದ 3 ಎಂದು ಗುರತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎ ಹೆಚ್ ಎಸ್ ವಕೀಲರಿಂದ.**

ಚಾಸಾ **1** ರವರಿಗೆ ಮಾಹಿತಿ ಬಂದಾಗ ಮದ್ಯಾಹ್ನ **12.30** ಗಂಟೆಯಾಗಿತ್ತು ಆಗ ನಾನು ಠಾಣೆಯಲ್ಲಿ ಇದ್ದೆನು. ಚಾಸಾ **1** ರವರು ನನಗೆ ಸದರಿ ವಿಷಯವನ್ನು **12.30** ಕ್ಕೆ ತಿಳಿಸಿರುತ್ತಾರೆ. ನಾನು ಪಂಚರನ್ನು ಕರೆದುಕೊಂಡು ಬರಲು ಠಾಣೆಯಿಂದ ಮದ್ಯಾಹ್ನ **12.45** ಗಂಟೆಗೆ ಹೋಗಿದ್ದೆನು. ಸದರಿ ಪಂಚರು ಠಾಣಾ ಆವರಣದಲ್ಲಿ ಇದ್ದರು. ಚಾಸಾ **6** ಮತ್ತು **7** ಪಂಚರು ಠಾಣಾ ಆವರಣದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಪಂಚರನ್ನು ಕರೆದುಕೊಂಡು ಮದ್ಯಾಹ್ನ **12.45** ಕ್ಕೆ ಹೋಗಿರುತ್ತೇನೆ. ನಾನು ಈ ಪ್ರಕರಣದಲ್ಲಿ ಚಾಸಾ **6** ಮತ್ತು **7** ರವರನ್ನು ಕರೆದುಕೊಂಡು ಹೋಗಿ ಚಾಸಾ **1** ರವರ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳ ಪೋಲಿಸ ಠಾಣೆಯಿಂದ **100** ಮೀಟರ್ ಅಂತರದಲ್ಲಿ ಇರುತ್ತದೆ. ಘಟನಾ ಸ್ಥಳದ ಅಕ್ಕ ಪಕ್ಕದಲ್ಲಿ ಸಾಕಷ್ಟು ಅಂಗಡಿ ಮತ್ತು ಹೋಟೆಲ್ ಮತ್ತು ಬಸ್ಸ ನಿಲ್ದಾಣ ಇದೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ಸಾಕಷ್ಟು ಜನರು ಇರುತ್ತಾರೆ ಎಂದರೆ ಸರಿ.

ಘಟನಾ ಸ್ಥಳದಲ್ಲಿ ಚಾಸಾ **1** ರವರ ಬಿಡಿ ಅಂಗಡಿ ಇರುತ್ತದೆ ಮತ್ತು ನ್ಯೂಸ ಪೇಪರ ನ್ನು ಮಾರಾಟ ಮಾಡುತ್ತಾರೆ ಎಂದರೆ ಸರಿ. ಆರೋಪಿಯ ಅಂಗಡಿಯಲ್ಲಿ ಸಾರ್ವಜನಿಕರು ನ್ಯೂಸ ಪೇಪರ ಖರೀದಿ ಮಾಡಲು ಮತ್ತು ಅವರ ಅಂಗಡಿಯಿಂದ ವಸ್ತುಗಳನ್ನು ಖರೀದಿ ಮಾಡಲು ಬಂದಿರುತ್ತಾರೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ಯಾವುದೆ ಪೋಟೊಗಳನ್ನು ತೆಗೆದಿರುವುದಿಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABI600000632022/truecopy/order-1.pdf

ಘಟನಾ ಸ್ಥಳದಲ್ಲಿ ಘಟನೆಯ ದಿನ ಚಾಸಾ 1 ರವರು ಅಕ್ಕ ಪಕ್ಕದಲ್ಲಿ ಇದ್ದ ಅಂಗಡಿಯ ಮಾಲೀಕರನ್ನು ಮತ್ತು ಸಾರ್ವಜನಿಕರನ್ನು ವಿಚಾರಣೆ ಮಾಡಿರುವುದಿಲ್ಲ.

ಪಂಚನಾಮೆಯನ್ನು ಘಟನಾ ಸ್ಥಳದಲ್ಲಿ ಮದ್ಯಾಹ್ನ 1.30 ರಿಂದ 2.30 ರ ಸಮಯದಲ್ಲಿ ತಯಾರು ಮಾಡಿರುತ್ತಾರೆ. ಪಂಚನಾಮೆಯನ್ನು ಮದ್ಯಾಹ್ನ 1 ಗಂಟೆಗೆ ಠಾಣೆಯಲ್ಲಿ ಬರೆಯಲಾಗಿದೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ನಾನು ಸಹಿಯನ್ನು ಮಾಡಿರುವುದಿಲ್ಲ. ಪಂಚನಾಮೆಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಆದ ಕಾರಣ ನಾನು ಪಂಚನಾಮೆಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮು.ಮಾ 1 ರಿಂದ 3 ನ್ನು ಪಂಚರ ಸಮಕ್ಷಮದಲ್ಲಿ ಸೀಲ್ ಮಾಡಿರುವುದಿಲ್ಲ. ಮು.ಮಾ 1 ರಿಂದ 3 ಮತ್ತು ಆರೋಪಿಗೆ ಯಾವುದೆ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಘಟನೆಯ ದಿನ ಆರೋಪಿ ಮಟಕಾ ಜುಜಾಟ ಆಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ನಮ್ಮ ಮೇಲಾಧಿಕಾರಿ ಆದ ಕಾರಣ ಅವರು ನೀಡಿರುವ ಸುಳ್ಳು ದೂರಿನ ಆಧಾರದ ಮೇಲೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಆರೋಪಿಯನ್ನು ಅಂಗ ಶೋಧನೆ ಮಾಡುವಾಗ ಶೋಧನಾ ವಾರೆಂಟ ತಯಾರಿಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆರೋಪಿಯು ಘಟನೆಯ ದಿನ ಯಾವುದೆ ತಪ್ಪನ್ನು ಮಾಡಿರುವುದಿಲ್ಲ ಆದರು ಆತನ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಆರೋಪಿ ಚಾಸಾ 3 ರವರಿಗೆ ಹೊಡೆದಿರುವುದಿಲ್ಲ ಮತ್ತು ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡೆಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಘಟನೆಯ ದಿನ ಓಡಿ ಹೋಗಲು ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಘಟನೆಯ ದಿನ ದಾಳಿ ಮಾಡಲು ನಾವು ಹೋಗಿರಲಿಲ್ಲ ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲಲ. 2 ನೇ ಆರೋಪಿ ಘಟನೆಯ ದಿನ ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೆ ತಪ್ಪನ್ನು ಮಾಡಡೆ ಇದ್ದರು ಅವರ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರ.ದ.ನ್ಯಾ.ದಂ., ಸಂಡೂರು.**

This is a True Copy of the Court Records Online. Authenticated @ districts.ecourtsindia.com/cnr/KABI600000632022/truecopy/order-1.pdf

www.ecourtsindia.com